## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 67/2019

ಸಾಕ್ಷಿಯನ್ನು ದಿಃ **08.12.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

| | | | |
|---|---|---|---|
| ಹೆಸರು | ಗಿರೀಶ್ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಕೆ.ಶಿವಪ್ಪ | | |
| ವಯಸ್ಸು | 44 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಮಂಜುನಾಥ ಬಡಾವಣೆ,<br>ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 30.05.2018 ರಂದು ಬೆಳಗಿನ ಜಾವ ಅಥವಾ ಮಧ್ಯರಾತ್ರಿ 1.40 ರ ಸಮಯದಲ್ಲಿ ನಮ್ಮ ಅಂಗಡಿಯ ಹಿಂದೆ ವಾಸವಾಗಿರುವ ಚಾಸಾ 4 ರವರು ನನಗೆ ಫೋನ್ ಮಾಡಿ, ನಿಮ್ಮ ಅಂಗಡಿಯ ಡೋರ್ ಅನ್ನು ಯಾರೋ ಹೊಡೆದಿದ್ದಾರೆ, ಕಳ್ಳರು ಬಂದಿದ್ದಾರೆ ಬನ್ನಿ ಎಂದು ಕರೆದರು. ನಾನು ಮತ್ತು ನಮ್ಮ ಕೆಲಸದ ಹುಡುಗ ಚಾಸಾ 5 ರವರು ಅಂಗಡಿ ಬಳಿ ಹೋಗಿ ನೋಡಿದಾಗ ಅಂಗಡಿಯ ಮರದ ಡೋರ್ ಮುರಿದು ಹಾಕಿದ್ದರು, ಬೀಗ ಹಾಗೆ ಇತ್ತು. ನಾವು ಒಳಗೆ ಹೋಗಿ ನೋಡಿದಾಗ ಕ್ಯಾಶ್ ಟೇಬಲ್ ಎಲ್ಲಾ ಚಿದ್ರವಾಗಿತ್ತು. ಡ್ರಾಯರ್ ಎಲ್ಲಾ ತೆಗೆದು ಕೌಂಟರ್ ಮೇಲೆ ಇಟ್ಟಿದ್ದರು ರೂ. 500 ರಿಂದ 800 ರಷ್ಟು ಚಿಲ್ಲರೆ ಹಣ ಕಳ್ಳತನವಾಗಿತ್ತು. ಮಧ್ಯದ ಬಾಟಲಿಗಳನ್ನು ಮುಟ್ಟಿರಲಿಲ್ಲ. ಸಿಸಿ ಕ್ಯಾಮೆರಾವನ್ನು ಚೆಕ್ ಮಾಡಿದಾಗ ಕ್ಯಾಮೆರಾವನ್ನು ತಿರುಗಿಸಿದ್ದರು. ಒಳಗಿನ ಕ್ಯಾಶ್ ಟೇಬಲ್ ಬಳಿ ಇರುವ ಕ್ಯಾಮೆರಾ ಬಳಿ ಪರಿಶೀಲಿಸಿದಾಗ ಅವರು

ಕಾಮೆರಾವನ್ನು ತಿರುಗಿಸುವಾಗ ತಿರುಗಿಸಿದವರ ಬಲಗೈ ಹೆಬ್ಬೆರಳು ಬಳಿ ರನ್ನ ಎಂಬ ಹಚ್ಚೆ ಕಾಣಿಸಿತು. ಆಗ ಕ್ಯಾಮೆರಾದ ಸಿಡಿ ತೆಗೆದು ಪೊಲೀಸರಿಗೆ ನೀಡಿರುತ್ತೇವೆ. ಈ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದಿಃ 31.05.2018 ರಂದು ಪೊಲೀಸರು ನಮ್ಮ ಶಿವ ವೈನ್ಸ್ ಸ್ಟೋರ್ ಬಳಿ ಬಂದು ಮಹಜರ್ ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ಚಾಸಾ 2 ಮತ್ತು 3 ರವರು ಹಾಜರಿದ್ದು, ಪೊಲೀಸರು ಮಹಜರ್ ಅಡಿ ಸಿ.ಡಿಯನ್ನು ವಶಪಡಿಸಿಕೊಂಡು ಹೋಗಿರುತ್ತಾರೆ. ದೂರಿನಲ್ಲಿ ಮತ್ತು ಮಹಜರ್ ನಲ್ಲಿರುವ ಸಹಿ ಸಾಕ್ಷಿಗಳನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ. 1 ಎಂದು, ಸಹಿಯನ್ನು ನಿಪಿ. 1(ಎ) ಎಂದು, ಮಹಜರ್ ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಮಹಜರ್ ಅನ್ನು ಸಂಜೆ 5 ರಿಂದ 6 ಗಂಟೆ ವರೆಗೂ ಮಾಡಿದ್ದರು. ಸಿ.ಡಿ ಯನ್ನು 4.30 ರಿಂದ 5 ಗಂಟೆ ಅವಧಿಯಲ್ಲಿ ಅಮಾನತ್ತು ಮಹಜರ್ ಅಡಿ ವಶಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ಅನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಅಡಿ ವಶಪಡಿಸಿಕೊಂಡ ಸಿ.ಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನನ್ನ ಜೊತೆ ಚಾಸಾ 2 ಮತ್ತು 3 ರವರು ಇದ್ದು, ಅಮಾನತ್ತು ಮಹಜರ್ ಗೆ ಸಹಿ ಮಾಡಿರುತ್ತಾರೆ.

**<u>ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರಿ ಎಂ.ಈ.ಎಂ ವಕೀಲರಿಂದ</u>**

ದೂರನ್ನು ನಾನೇ ಬರೆದಿದ್ದೇನೆ. ದೂರಿನಲ್ಲಿ ಬರೆದಿರುವ ವಿಚಾರ ತಿಳಿದುಕೊಂಡಿದ್ದೇನೆ. ದೂರನ್ನು 1 ದಿನ ತಡವಾಗಿ ಕೊಟ್ಟಿದ್ದೇನೆ ಎಂದರೆ ಸರಿ. ದೂರನ್ನು ಏಕೆ ತಡವಾಗಿ ನೀಡಿದ್ದೇನೆ ಎಂದು ನನ್ನ ದೂರಿನಲ್ಲಿ ಕಾರಣ ತಿಳಿಸಿಲ್ಲ ಎಂದರೆ ಸರಿ. ಅದೆ ದಿನ ದೂರು ಕೊಡಲು ನನಗೇನು ತೊಂದರೆ ಇರಲಿಲ್ಲ. ನನ್ನ ಅಂಗಡಿಯಲ್ಲಿದ್ದ ಸುಮಾರು ರೂ. 800 ಹಣ ಕಳ್ಳತನವಾಗಿತ್ತು ಎಂದು

ಹೇಳಿದ್ದು  ರೂ. 800 ಇತ್ತು ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.  ಅದೆ ರೀತಿ ರೂ. 500 ರಿಂದ 800 ಇತ್ತು ಎಂಬ ಬಗ್ಗೆ ಯಾವುದೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.  ಆ ದಿನ ಅಂಗಡಿಯ ಬಾಗಿಲು ಮುರಿದಿದ್ದ ಬಗ್ಗೆ ಪೊಲೀಸರು ಪೋಟೋ ತೆಗೆದುಕೊಳ್ಳಲಿಲ್ಲ. ಆ ದಿನ ಕಳ್ಳತನವಾಗಿಲ್ಲ ನಮ್ಮ ಅಂಡಿಯ ಬಾಗಿಲು ಯಾರು ಮುರಿದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಂಗಡಿಯಲ್ಲಿ ತುಂಬಾ ಬೆಲೆ ಬಾಳುವ ಮಧ್ಯ ಇತ್ತು ಎಂದರೆ ಸರಿ. ಆ ದಿನ ನಮ್ಮ ಅಂಗಡಿಯಲ್ಲಿ ಕಳ್ಳತನವಾಗಿದ್ದೆ ನಿಜವಾಗದಲ್ಲಿ ಮಧ್ಯ ಕೂಡ ಕಳ್ಳತನವಾಗಿಬೇಕಿತ್ತು ಆದರೆ ಅಂತಹ ಯಾವುದೆ  ಕಳ್ಳತನವಾಗಿಲ್ಲ, ನಮ್ಮ ಅಂಗಡಿಯ ಬಾಗಿಲನ್ನು ಕೂಡ ಹೊಡೆದಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಗೆ ಪೊಲೀಸರು ನೊಟೀಸು ಕೊಟ್ಟಿರಲಿಲ್ಲ, ಸ್ಥಳ  ಮಹಜರ್ ಮಾಡಲು ಯಾವ ಪೊಲೀಸರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸ್ಥಳ ಮಹಜರ್ ನಲ್ಲಿ ಏನೇನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಆದರೆ ನಾನು ಸಹಿ ಮಾಡಿದ್ದೇನೆ ಎಂದು ನುಡಿದು ಆದರೆ  ಕಳ್ಳನತ ಬಗ್ಗೆ ಬರದಿದ್ದಾರೆ ಎನ್ನುತ್ತಾರೆ. ಮಹಜರ್ ಅನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ 2 ಮತ್ತು  3 ರವರು ನನ್ನ ಸಂಬಂಧಿಕರು ಮತ್ತು ಸ್ನೇಹಿತರು ಎಂರದೆ ಸರಿಯಲ್ಲ.  ಚಾಸಾ 2 ಮತ್ತು 3 ರವರು ನನಗೆ ಬೇಕಾದಾವರಾಗಿದ್ದು, ಅವರು ನನ್ನ ಮಾತು ಕೇಳಿ ನಿಪಿ. 2 ರ ಮಹಜರ್ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ. 3 ರ ಅಮಾನತ್ತು ಮಹಜರ್ ಕೂಡ  ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಮಾನತ್ತು ಮಹಜರ್ ಬಗ್ಗೆ ಕೂಡ ನನಗೆ  ಪೊಲೀಸರು ಯಾವುದೆ ನೊಟೀಸು ಕೊಟಿಲ್ಲ ಎಂದರೆ ಸರಿ. ಅದೇ ರೀತಿ ಅಮಾನತ್ತು ಮಹಜರ್ ಮಾಡುವ ಕಾಲಕ್ಕೆ ಯಾವ ಪೊಲೀಸರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ರಾಜೇಗೌಡ ಎಂಬುವವರು  ಇರುತ್ತಾರೆ. ನಾನು ಹೇಳುತ್ತಿರುವಂತಹ ರಾಜೇಗೌಡ ಎಂಬ ಪೊಲೀಸರು ಅಮಾನತ್ತು ಮಹಜರ್ ಸಮಯದಲ್ಲಿ ಇರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಆ ದಿನ ಯಾವುದೆ ಸಿ.ಡಿ ಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು

ಯಾವುದೆ ಸಿ.ಡಿ.ಯನ್ನು ಕೊಡದೆ ಇದ್ದರೂ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಸಿ ಕ್ಯಾಮೆರಾವನ್ನು ನೋಡಿದಾಗ ಅದರಲ್ಲಿ ಕ್ಯಾಮೆರಾ ತಿರುಗಿಸುತ್ತಿರುವವರ ಕೈಯಲ್ಲಿ ರನ್ನ ಎಂಬ ಹಚ್ಚೆ ಇತ್ತು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**<u>ಪಾಟೀಸವಾಲು ಃ 2 ನೇ ಆರೋಪಿ ಪರ ಕು. ಜೆ.ಪಿ /ಶ್ರೀ ಎಸ್.ಎನ್.ಕೆ ವಕೀಲರಿಂದ</u>**

ನಮ್ಮ ಅಗಂಡಿಯ ಸ್ಟಾಕ್ ಪುಸ್ತಕಗಳಲ್ಲಿ ಎಷ್ಟು ಸ್ಟಾಕ್ ಬಂದಿದೆ ಎಷ್ಟು ವ್ಯಾಪಾರವಾಗಿದೆ ಮತ್ತು ಎಷ್ಟು ಖರ್ಚಾಗಿದೆ ಎಂಬೆಲ್ಲಾ ವಿವರಗಳನ್ನು ಸ್ಟಾಕ್ ಬುಕ್ ನಲ್ಲಿ ಬರೆದು ಸಹಿ ಮಾಡುತ್ತೇವೆ ಎಂದರೆ ಬರೆಯುತ್ತೇವೆ ಆದರೆ ಸಹಿ ಮಾಡುವುದಿಲ್ಲ. ಆ ದಿನ ಎಷ್ಟು ವ್ಯಾಪಾರವಾಯಿತು, ಎಷ್ಟು ಸ್ಟಾಕ್ ಉಳಿದಿತ್ತು ಎಂಬ ವಿವರವನ್ನು ನಮೂದಿಸಿದ್ದೇವು ಎಂದರೆ ಸರಿ. ಅಂಗಡಿಯಲ್ಲಿ ಕೊನೆಯಲ್ಲಿ ಉಳಿಯುವ ಚಿಲ್ಲರೆ ಹಣದ ಬಗ್ಗೆ ಕೂಡ ಸ್ಟಾಕ್ ಬುಕ್ ನಲ್ಲಿ ನಮೂದು ಮಾಡುತ್ತೇವೆ ಎಂದರೆ ಅದನ್ನು ನಮೂದು ಮಾಡುವುದಿಲ್ಲ. ನಮ್ಮ ಅಂಗಡಿಯ ಕ್ಯಾಶ್ ಟೇಬಲ್ ಛಿದ್ರ ಆಗಿತ್ತು ಎಂದು ಹೇಳಿದ್ದು, ಅದು ಯಾವ ಬಣ್ಣದ ಟೇಬಲ್ ಮತ್ತು ಅದರ ಲಾಕ್ ನ ವಿವರಗಳನ್ನು ಮಹಜರ್ ಸಮಯದಲ್ಲಿ ನಾನು ನೀಡಿರಲಿಲ್ಲ. ಸದರಿ ವಿವರಗಳನ್ನು ಪೊಲೀಸರ ಮುಂದೆ ಹೇಳಬೇಕಾಗಿತ್ತು ಎಂದರೆ ಅವರು ಕೇಳಲಿಲ್ಲ, ನಾನು ಹೇಳಲಿಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಪೊಲೀಸರು ನಮ್ಮ ಅಂಗಡಿ ಬಳಿ ಬಂದಿರಲಿಲ್ಲ ಆದ್ದರಿಂದಲೇ ಅವರು ವಿವರ ಕೇಳಿಲ್ಲ ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನಾವು ಪ್ರತಿದಿನ ಕ್ಯಾಶ್ ಟೇಬಲ್ ಅನ್ನು ಲಾಕ್ ಮಾಡಿ ಹೋಗುತ್ತೇವೆ ಎಂದರೆ ಚಿಲ್ಲರೆ ಕಾಸು ಇರುತಿದ್ದ ಕಾರಣ ಲಾಕ್ ಮಾಡುತ್ತಿರಲಿಲ್ಲ. ದೂರನ್ನು ನಾನೆ ಬರೆದಿರುತ್ತೇನೆ. ದೂರನ್ನು ಬರೆದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ವಿವರಗಳನ್ನು ಪೊಲೀಸ್ ಠಾಣೆಯಲ್ಲಿ

ಪೊಲೀಸರ ಮುಂದೆ ಹೇಳಿದೆ, ಆ ರೀತಿ ನಾನು ಹೇಳಿದಾಗ ಇದ್ದ ಪೊಲೀಸರು ಯಾರು ಎಂದು ನನಗೆ ಹೇಳಲಾಗುವುದಿಲ್ಲ. ಯಾವುದೆ ಸ್ಥಳ ಮಹಜರ್ ಮಾಡಿಲ್ಲ, ನಾನು, ಚಾಸಾ 2 ಮತ್ತು 3 ರವರು ಸ್ಥಳ ಮಹಜರ್ ಸಮಯದಲ್ಲಿ ಇರಲಿಲ್ಲ ಆದ್ದರಿಂದಲೆ ಕ್ಯಾಶ್ ಟೇಬಲ್ ನ ವಿವರಗಳನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ನಮ್ಮ ಅಂಗಡಿಯಲ್ಲಿ ಯಾವುದೆ ರೀತಿಯ ಕಳ್ಳತನ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ರೀತಿ ನನ್ನ ಮುಂದೆ ಯಾವುದೆ ಅಮಾನತ್ತು ಮಹಜರ್ ಆಗಿಲ್ಲ ನಾನು ಅದಕ್ಕೆ ಯಾವುದೆ ವಿವರಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ. 3 ರ ಅಮಾನತ್ತು ಮಹಜರ್ ನಲ್ಲಿ ಏನು ಬರೆದಿದ್ದಾರೆ ಎಂಬ ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಸಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ಹುಣಸೂರು.